ನಿನಗನಿಸುತ್ತಾ? ನಿಂಗೆ ಅದರಿಂದ ಸಮಾಧಾನ ಸಿಗುವುದಾದರೆ ಹೇಳು. ಕೇಳುವ' ಅಂದಿದ್ದಳು. ನಂಜಿನ ಹುಂಜದ ಬಗ್ಗೆ ಮಾತು ಸಾಕು ಬಿಡು ಅನ್ನುತ್ತಾ ಕಾಫಿ ಮುಗಿಸಿದ್ದರು. ಆದರೆ, ತನಗೆ ಕೆಂಬೂತ ಅನ್ನುವ ಅಡ್ಡ ನಾಮಕರಣದ ವಿಚಾರ ಅವಳಿಗೆ ಮೊದಲೇ ಗೊತ್ತಾಗಿತ್ತು. ಆದರದು ಬೇರೆ ನಮೂನೆಯಲ್ಲಿ. ಡೆಲ್ಲಿಯಲ್ಲಿ ನಡೆದ ಬಹುಭಾಷಾ ಕಾವ್ಯ ಕಮ್ಮಟದಲ್ಲಿ ಭಾಗವಹಿಸಿ ಬಂದ ವಾರದಲ್ಲಿ ಸುಹಾಸನೆಂಬ ಯುವ ಬರಹಗಾರನೊಬ್ಬ ಕರೆ ಮಾಡಿ ತಾನು ಆಕೆಯ ಬರಹಗಳನ್ನು ತಪ್ಪದೇ ಓದುವ ಅಭಿಮಾನಿ ಎಂದು ಪರಿಚಯಿಸಿಕೊಂಡು ತಾನು ಬರೆದ ವಿಮರ್ಶೆಯೊಂದನ್ನು 'ಕನ್ನಡನುಡಿ' ಪತ್ರಿಕೆಯಲ್ಲಿ ಪ್ರಕಟಿಸುತ್ತೀರಾ ಎಂದು ಕೇಳಿದ್ದ. ರಮಣಿ, 'ಲೇಖನ ಕಳುಹಿಸು. ಸಂಪಾದಕರದೇ ತೀರ್ಮಾನ' ಅಂದಿದ್ದಳು. ಆತ ಸಾಹಿತ್ಯದ ಬಗ್ಗೆ ಸಾಹಿತಿಗಳ ಬಗ್ಗೆ ಮಾತು ತಿರುಗಿಸಿ ಅವರಿವರ ಪರಿಚಯ ತನಗಿದೆಯೆನ್ನುತ್ತ ಡೆಲ್ಲಿಯಲ್ಲಿ ನಿಮ್ಮ ರೂಮಿನ ಬಳಿ ಅವರು ಎಣ್ಣೆ ಹಾಕಿಕೊಂಡು ಬಂದು ರಾದ್ಧಾಂತ ಆಗುವ ಹಾಗೆ ಮಾಡಿದ್ದು ತುಂಬಾ ಚೀಪ್ ಮೇಡಮ್. ಅವನಾಗ್ತದೆ ಅಂದ್ರೆ ಇವನಾಗುವುದಿಲ್ವ. ಆ ಕೆಂಬೂತ ತಾನು ಸಾಚಾ ಗೌರಮ್ಮ ಅಂತ ಯಾರನ್ನು ನಂಬಿಸ್ತಿದಾಳೆ ಇಲ್ಲಿ. ಕೆಂಬೂತ ಮೇಲು ಮೇಲಿಂದ ಒಂಟಿ ರಾಣಿ ಥರ ನಾಟ್ಕ ಮಾಡುತ್ತೆ. ಸರಿಯಾಗಿ ಗಮನಿಸಿದ್ರೆ ಜಂಟಿಗಾರ ಅಲ್ಲೆಲ್ಲೊ ಮರೆಯಲ್ಲಿ ಕುಂತಿರ್ತದೆ. ಹಾಗೆ ನಮ್ಮ ರಮಣಿ ಮೇಡಮ್ಮೋರು ಅಂತೆಲ್ಲ ಕೆಟ್ಟದಾಗಿ ಮಾತಾಡ್ತಿದ್ರು ಮೇಡಮ್' ಅನ್ನುತ್ತಿರುವಾಗಲೇ ಅವಳು ಅವನ ಬಾಯಿ ಮೇಲೆ ಬಡಿದಂತೆ, “ನೋಡಪ್ಪ ಕೆಂಬೂತ, ಕೆಂಬೂತವನ್ನೇ ಆಯ್ಕೆ ಮಾಡ್ಕೊಳುತ್ತೆ. ಅದಕ್ಕೆ ರತ್ನಪಕ್ಷಿ ಅಂತನೂ ಹೆಸರಿದೆ ಅನ್ನುವ ಸಣ್ಣ ತಿಳಿವಳಿಕೆಯೂ ಅವನಿಗಿಲ್ವ ಅಂತ ರಮಣಿ ಮೇಡಮ್ಮು ಕೇಳಿದ್ರು ಅಂತೇಳು. ನೀವು ನನ್ನ ಅಭಿಮಾನಿ ಅಂತ ಹೇಳಿರೋದ್ರಿಂದ ಒಂದು ಮಾತು ಹೇಳ್ತೀನಿ. ಹುಳಿತೇಗಿನ ನಾಯಕರುಗಳು ನೀನು ಕೆಲಸ ಮಾಡುವ ಯೂನಿವರ್ಸಿಟಿಲೂ ಇರ್ತಾರಲ್ವಾ. ಅಂಥೋರೆಲ್ಲ ಇಂತಹ ಸುದ್ದಿ ಬೊಗಳಲು ಬಿಸ್ಕತ್ತು ನಾಯಿಮರಿಗಳನ್ನು ಸಾಕಿಕೊಂಡಿದಾರೆ ಅಂತ ಸುದ್ದಿ ಇದೆ ಕಣಪ್ಪ. ಹೀಗೆಲ್ಲ ಮಾತಾಡಿ ನೀನೂ ಆ ನಾಯಿಮರಿ ಇರಬಹುದಾ ಅಂತ ಅನುಮಾನ ಪಡೋ ಹಾಗೆ ಮಾಡ್ಕೊಬೇಡ. ಹುಷಾರಾಗಿರು' ಅಂದಿದ್ದಳು. ಆ ಯುವ ನಾಯಕ ಬೆ ಬೆ ಬೆ ಅನ್ನುತ್ತಾ ಫೋನ್ ಕಟ್ ಮಾಡಿದ್ದ. ಅವಳಿಗೆ ತನ್ನ ಬರಹದ ವ್ಯಾಪ್ತಿಯನ್ನು ಕೆಂಬೂತಕ್ಕೆ ಹೋಲಿಸಿ ಬರೆದಿದ್ದು ಗೊತ್ತಿತ್ತು. ಆದರೆ, ಈ ಇನ್ನೊಂದು ಅರ್ಥದ ಬಗ್ಗೆ ಆಗಷ್ಟೇ ತಿಳಿದಿತ್ತು...



ಮೈಕಲ್ಲಿ ನಿರೂಪಕ ಗಂಭೀರವಾಗಿ 'ಹಿಟ್ಲರನ ಸಂತಾನಕ್ಕೆ ನಪುಂಸಕತೆಯೇ ಇಲ್ಲ' ಎಂಬ ಸಾಲನ್ನುದ್ಧರಿಸಿದೊಡನೆ ಅರಿವಿಲ್ಲದೆಯೇ ಎಲ್ಲರಲ್ಲೂ ರೋಮಾಂಚನ. ಈಗ ಕವಿತೆ ಓದುವ ಸರದಿ ಲೋಹಿತೇಶ್ವರನದೆಂದು ಹೇಳಬೇಕಾಗಿಯೇ ಇಲ್ಲ. ಅಷ್ಟು ಪ್ರಸಿದ್ಧವಾಗಿತ್ತು ಆ ಕವಿತೆ. ಅಂತಹ ಸಾಲುಗಳು ಅದೆಲ್ಲಿಂದ ಹಿಡಿಯುತ್ತಾನೋ ಎಂದು ಲೋಹಿತೇಶ್ವರನ ಬಗ್ಗೆ ಸಹ ಬರಹಗಾರರು ಕರುಬುತ್ತಿದ್ದರು.

ರಮಣಿ, ಲೋಹಿತೇಶ್ವರನಿಗೆ ನಿಮ್ಮ ಇಂದಿನ ಕವಿತೆಗಾಗಿ ಇಡೀ ಸಭಾಂಗಣವೇ ಕಾದಿದೆ ಎಂದು ಶುಭ ಹಾರೈಸಿದಳು. ಮಹಿಮಾ, ನಿಮ್ಮ ಕವಿತೆ ಕೇಳಿದ ಮೇಲೆ ಬೇರೆಯದೆಲ್ಲ ಸಪ್ಪೆಯಾಗಿಬಿಡುತ್ತದೆ. ನಿಮ್ಮದನ್ನು ಈ ಗೋಷ್ಠಿಯ ಕೊನೆಯಲ್ಲಿಡಬೇಕಿತ್ತು ಅಂದಳು. ನಿರೂಪಕ ಲೋಹಿತೇಶ್ವರನ ಬಗ್ಗೆ ಹೇಳುತ್ತಿದ್ದರೆ ಲೋಹಿತೇಶ್ವರ ವೇದಿಕೆಯ ಬಳಿ ನಿಧಾನವಾಗಿ ನಡೆದು ಹೊರಟ. ಆತ ಕವಿತೆ ಓದಲು ತೊಡಗುತ್ತಿದ್ದಂತೆ ಅವನು ನಿಂತ ಭಂಗಿಯಲ್ಲೊಂದು ಅಸಹಜ ಚಲನೆ ಎಲ್ಲರ ಗಮನಕ್ಕೆ ಬಂತು. ಏನಾಗಿದೆ ಇವರಿಗೆ? ಹೆಲ್ತ್ ಇಷ್ಯೂಸ್ ಏನಾದರೂ ಇದೆಯಾ, ಮಹಿಮಾ ಸಣ್ಣಗೆ ಪಿಸುಗುಟ್ಟಿದಳು. ಲೋಹಿತೇಶ್ವರ ಕವಿತೆಯ ನಾಲ್ಕು ಸಾಲು ಓದುವ ಹೊತ್ತಿಗೆ ಚಡಪಡಿಸಲಾರಂಭಿಸಿದ್ದ. ನಿರೂಪಕ ನೀರಿನ ಬಾಟಲಿ ತಂದಿಟ್ಟ. ಆದರದನ್ನು ಎತ್ತಿಕೊಳ್ಳುವ ತ್ರಾಣ ಇಲ್ಲದವನಂತೆ ಲೋಹಿತೇಶ್ವರ ಕುಸಿಯಲಾರಂಭಿಸಿದ.